# ಸಿರಿತನದ ಬೆಟ್ಟವೇರಿದ ಫಲ್ಗುಣಿ



■ ಪ್ರವೀಣ ಕುಲಕರ್ಣಿ

ಬದುಕಿನಲ್ಲಿ ಹೆಣಗಾಡುತ್ತಾ ಐವತ್ತು ವರ್ಷಗಳನ್ನು ಕಳೆದವರು, ‘ಅರ್ಧ ಆಯುಷ್ಯವೇ ಮುಗಿಯಿತು, ಜೀವನದಲ್ಲಿ ಇನ್ನು ಸಾಧಿಸಲು ಏನಿದೆ’ ಎಂದು ಗೊಣಗುವುದನ್ನು ನಾವೆಲ್ಲ ಕೇಳಿದ್ದೇವೆ, ಅಲ್ಲವೇ? ಹಾಗೆ ಗೊಣಗುವವರು ನೈಕಾ ಕಂಪನಿಯ ಒಡತಿ ಫಲ್ಗುಣಿ ನಯರ್ ಅವರ ಕಥೆ ಕೇಳಬೇಕು. ತಮಗೆ ಐವತ್ತು ವರ್ಷಗಳಾದಾಗ ಈ ಕಂಪನಿಯನ್ನು ಹುಟ್ಟುಹಾಕಿದ ಫಲ್ಗುಣಿ, ಅಂತಹ ಸಾಹಸಕ್ಕೆ ಕೈಹಾಕಿ ಕೇವಲ ಹತ್ತು ವರ್ಷಗಳಲ್ಲಿ ಭಾರತದ ನಂ. 1 ಶ್ರೀಮಂತೆ ಎನಿಸಿದ್ದಾರೆ.

ಮುಂಬೈಯಲ್ಲಿ ನೆಲೆ ಕಂಡುಕೊಂಡಿದ್ದ ಗುಜರಾತಿ ಉದ್ಯಮಿಯ ಪುತ್ರಿಯಾದ ಫಲ್ಗುಣಿ ಅವರು, ಅಹಮದಾಬಾದ್‌ನ ‘ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್’ನ ವಿದ್ಯಾರ್ಥಿನಿ ಆಗಿದ್ದವರು. ಕೊಟಕ್ ಮಹೀಂದ್ರಾ ಬ್ಯಾಂಕ್‌ನ ಹಲವು ಹುದ್ದೆಗಳನ್ನು ಅಲಂಕರಿಸಿ, ಕೊನೆಗೆ ಅದರ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಗೂ ಏರಿದ್ದವರು. ಸ್ವಂತ ಉದ್ಯಮ ಸ್ಥಾಪಿಸುವ ಮಹತ್ವಾಕಾಂಕ್ಷೆಯಿಂದ ಕೊಟಕ್ ಮಹೀಂದ್ರಾ ಬ್ಯಾಂಕ್‌ನ ಹೊಣೆಯಿಂದ ಮುಕ್ತರಾಗಿ ಹೊರಬಂದ ಅವರು, ಸೌಂದರ್ಯ ಸಾಧನಗಳ ಮಾರುಕಟ್ಟೆ ಎಷ್ಟು ದೊಡ್ಡದು ಎಂಬುದನ್ನು ಸ್ಪಷ್ಟವಾಗಿ ಗುರ್ತಿಸಿದವರು. ಅದರ ಪರಿಣಾಮ, ನೈಕಾ ಎಂಬ ಇ–ಕಾಮರ್ಸ್ ಕಂಪನಿಯ ಜನನ.

ಹಾಗೆ ನೋಡಿದರೆ ಬ್ಯಾಂಕ್‌ನಲ್ಲಿ ಕೆಲಸ ಮಾಡುವಾಗ ಫಲ್ಗುಣಿ ಅವರು ಸೌಂದರ್ಯ ಸಾಧನಗಳ ಕುರಿತು ಅಷ್ಟಾಗಿ ತಲೆ ಕೆಡಿಸಿಕೊಂಡವರಲ್ಲ. ಆದರೆ, ಭಾರತದಲ್ಲಿ ಸೌಂದರ್ಯ ಸಾಧನಗಳ ಮಾರುಕಟ್ಟೆ ಅವಕಾಶಗಳನ್ನು ಯಾರೂ ಸಮರ್ಪಕವಾಗಿ ಬಳಸಿಕೊಂಡಿಲ್ಲ ಎನ್ನುವುದು ಅವರ ಅರಿವಿಗೆ ಬರುತ್ತಿದ್ದಂತೆ ಮೂರೂ ಹೊತ್ತು ಅದರ ಕುರಿತೇ ಯೋಚಿಸಲು ಆರಂಭಿಸಿದವರು. ಜಗತ್ತಿನ ಅತ್ಯಂತ ದುಬಾರಿ ಬ್ರ್ಯಾಂಡ್‌ಗಳ ಸಾಮಗ್ರಿಗಳನ್ನು ತರಿಸಿ, ಅವುಗಳ ಮೇಲೆ ಅಧ್ಯಯನ, ಪ್ರಯೋಗ ನಡೆಸಿದವರು. ಅದಕ್ಕಾಗಿ ಸಾವಿರಾರು ಡಾಲರ್‌ಗಳನ್ನು ಖರ್ಚು ಮಾಡಿದವರು.

‘ಜಗತ್ತಿನ ಉತ್ಕೃಷ್ಟ ಬ್ರ್ಯಾಂಡ್‌ಗಳ ಉತ್ಪನ್ನಗಳು ನಮ್ಮ ಭಾರತೀಯ ಮಹಿಳೆಯರಿಗೂ ಸಿಗಬೇಕು ಮತ್ತು ಸೌಂದರ್ಯದ ಕುರಿತು ಅವರಿಗೆ ಸರಿಯಾದ ಮಾಹಿತಿಯನ್ನೂ ಒದಗಿಸಬೇಕು ಎನ್ನುವುದು ನನ್ನ ಹಂಬಲವಾಗಿತ್ತು. ಹೀಗಾಗಿ ಸಾಕಷ್ಟು ಅಧ್ಯಯನದ ಬಳಿಕ ನಾನು ಈ ಕಂಪನಿಯನ್ನು ಹುಟ್ಟುಹಾಕಿದೆ’ ಎನ್ನುತ್ತಾರೆ ಫಲ್ಗುಣಿ. ‘ಮಹಿಳೆಯರು ಕುಟುಂಬದ ಹೊಣೆಯನ್ನು ನಿಭಾಯಿಸಬೇಕು ನಿಜ. ಆದರೆ, ಅದಕ್ಕಿಂತ ಮೊದಲು ತಮ್ಮ ಬಗೆಗೆ ತಾವು ಯೋಚಿಸಬೇಕು. ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳಬೇಕು. ಮಹಿಳೆಯರು ಸಂತೃಪ್ತರಾಗಿದ್ದಾಗ ತಮ್ಮ ಹೊಣೆಗಳನ್ನು ಆತ್ಮವಿಶ್ವಾಸದಿಂದ ನಿಭಾಯಿಸಬಲ್ಲರು’ ಎಂದು ಅವರು ಅಭಿಪ್ರಾಯಪಡುತ್ತಾರೆ.

ಲ್ಯಾಕ್ಮೆ, ಕಾಯ, ಲೋರಿಯಲ್‌ನಂತಹ ಪ್ರತಿಷ್ಠಿತ ಬ್ರ್ಯಾಂಡ್‌ಗಳ ಉತ್ಪನ್ನಗಳನ್ನೂ ನೈಕಾ ಮಾರಾಟ ಮಾಡುತ್ತದೆ. 850ಕ್ಕೂ ಅಧಿಕ ಬ್ರ್ಯಾಂಡ್‌ಗಳ 35 ಸಾವಿರ ವಿಧದ ಉತ್ಪನ್ನಗಳು ಈ ಮಾರಾಟ ವೇದಿಕೆಯಲ್ಲಿ ಲಭ್ಯವಿವೆ. 2012ರಲ್ಲಿ ನವೋದ್ಯಮವಾಗಿ ಶುರುವಾದ ಈ ಕಂಪನಿ, ಹತ್ತೇ ವರ್ಷಗಳಲ್ಲಿ ಸವೆಸಿದ ಹಾದಿ ಅನನ್ಯವಾದುದು. ಸೌಂದರ್ಯದ ಉದ್ಯಮದಲ್ಲಿ ಆಸಕ್ತಿ ಹೊಂದಿರುವ ಮಹಿಳೆಯರಿಗೆ ನೈಕಾ ಮೂಲಕ ತರಬೇತಿ ಕೋರ್ಸ್ ಅನ್ನೂ ಫಲ್ಗುಣಿ ಅವರು ನಡೆಸುತ್ತಿದ್ದಾರೆ.

‘ಯಾವುದೇ ಸಾಹಸಕ್ಕೆ ಕೈಹಾಕುವ ಮುನ್ನ ಭಿನ್ನವಾಗಿ ಯೋಚಿಸಬೇಕು ಮತ್ತು ಅದರ ಪ್ರತಿಕೂಲ ಪರಿಣಾಮಗಳನ್ನು ಎದುರಿಸಲು ಸನ್ನದ್ಧವಾಗಿರಬೇಕು’ ಎನ್ನುವುದು ಫಲ್ಗುಣಿ ಅವರ ಸಲಹೆ. ‘ನಾನು ಉದ್ಯಮವನ್ನು ಸ್ಥಾಪಿಸಬೇಕು ಎಂದು ನಿರ್ಧರಿಸಿದ ಮೇಲೆ ಮಾರುಕಟ್ಟೆ ಟ್ರೆಂಡ್‌ಗಳನ್ನು ಗಮನಿಸಿದೆ. ಎಲ್ಲರೂ ಫ್ಯಾಷನ್ ಇಲ್ಲವೆ ಎಲೆಕ್ಟ್ರಾನಿಕ್ ಉತ್ಪನ್ನಗಳ ಹಿಂದೆಯೇ ಓಡುತ್ತಿದ್ದರು. ಸೌಂದರ್ಯ ಸಾಧನಗಳ ಮಾರುಕಟ್ಟೆ ಅಷ್ಟಾಗಿ ವಿಕಸನಗೊಂಡಿರಲಿಲ್ಲ. ಹೀಗಾಗಿ ನನ್ನ ಭವಿಷ್ಯವನ್ನು ಈ ಕ್ಷೇತ್ರದಲ್ಲಿಯೇ ಪ್ರಯೋಗಕ್ಕೆ ಒಡ್ಡಲು ನಿರ್ಧರಿಸಿದೆ’ ಎಂದು ವಿವರಿಸುತ್ತಾರೆ. ಮುಂಬೈನ ಸೈನರ್ಜಿ ಐ.ಟಿ ಪಾರ್ಕ್‌ನಲ್ಲಿ ಇರುವ ನೈಕಾದ ಪ್ರಧಾನ ಕಚೇರಿಯಲ್ಲಿ ಫಲ್ಗುಣಿ ಇದ್ದಾರೆಂದರೆ ‘ನೈಕಾ’ದ ಸಂಪರ್ಕ ಜಾಲದಲ್ಲಿ ಮಿಂಚಿನ ಸಂಚಾರ ಆಗುತ್ತಿದೆ ಎಂದೇ ಲೆಕ್ಕ ಎಂದು ಅವರನ್ನು ಹತ್ತಿರದಿಂದ ಬಲ್ಲವರು ಹೇಳುತ್ತಾರೆ.

ನೈಕಾದ ಮುಖ್ಯ ಕಾರ್ಯನಿರ್ವಹಣಾಧಿಕಾರಿಯೂ ಆಗಿರುವ ಫಲ್ಗುಣಿ ಸದ್ಯ 450 ಕೋಟಿ ಡಾಲರ್ (36 ಸಾವಿರ ಕೋಟಿ ರೂಪಾಯಿ) ಒಡತಿ. ಸ್ವಂತ ಪರಿಶ್ರಮದಿಂದ ದೇಶದ ನಂ. 1 ಶ್ರೀಮಂತೆ ಎನ್ನುವ ಪಟ್ಟಕ್ಕೇರಿದ ಸಾಧಕಿ. ಅವರ ಪತಿ ಸಂಜಯ್ ನಯರ್ ಸಹ ಉದ್ಯಮಿ. ಆದರೆ, ಪತ್ನಿ ಸ್ವತಂತ್ರ ಉದ್ಯಮ ಸ್ಥಾಪಿಸುವ ಯೋಚನೆ ಮುಂದಿಟ್ಟಾಗ ಬೆಂಬಲಕ್ಕೆ ನಿಂತವರು. ಅವರ ಅವಳಿ ಪುತ್ರಿಯರು ಮತ್ತು ಪುತ್ರ ಸಹ ಈಗ ಇದೇ ಉದ್ಯಮದಲ್ಲಿ ತೊಡಗಿಸಿಕೊಂಡಿದ್ದಾರೆ. ನೈಕಾವನ್ನು ಜಗತ್ತಿನ ಸೌಂದರ್ಯ ಮಾರುಕಟ್ಟೆಯಲ್ಲಿ ಹೊಳೆಯುವ ತಾರೆಯಾಗಿ ರೂಪಿಸುವ ಗುರಿ ಹೊಂದಿದ್ದಾರೆ. ಸಾಧನೆಯ ಛಲ ಹೊಂದಿರುವ ಇತರ ಮಹಿಳೆಯರಿಗೂ ಫಲ್ಗುಣಿ ಅವರು ಮಾದರಿಯಾಗಿದ್ದಾರೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65